"ರುದ್ರಮುನಿ ಕಂಠಮಟ್ಟ ಕುಡಿದ್ರೂ ಬೈಕ್ ಚಲಾಯಿಸಿಕೊಂಡು ವಾಪಸು ಬರ್ತಾ ಇದ್ದನೆ?"

"ಎಷ್ಟು ಕುಡಿದ್ರೂ, ಅವ್ನು ಅರಗಿಸಿಕೊಳ್ತಾ ಇದ್ದ. ಆದ್ರೆ ಒಮ್ಮೆ ಮಾತ್ರ ಅವ್ನಿಗೆ ಸ್ಥಿಮಿತ ತಪ್ಪಿದಂತಿತ್ತು. ಅದು ಏಡುಕೊಂಡಲುವಿನ ಹತ್ರ ಹೋಗೋಕೆ ಶುರುಮಾಡ್ದ ಮೂರನೆದ್ದೋ ಅಥವಾ ನಾಲ್ಕನೆದ್ದೋ ದಿನ. ಸರಿಯಾಗಿ ನೆನಪಿಲ್ಲ. ಪಾರ್ಟಿ ರಾತ್ರಿ ಬರಲೇ ಇಲ್ಲ. ನನ್ಗೆ ಚಿಂತೆಯಾಯ್ತು. ಅವ್ನಿಗಿಂತ ಹೆಚ್ಚಾಗಿ ನನ್ನ ಬೈಕ್ ಬಗ್ಗೆ ಚಿಂತೆ. ಬೆಳಗ್ಗಿನ ಜಾವ ಐದು ಗಂಟೆಗೆ ಬಂದ್ನಂತೆ. ಯಾಕೆ ಆವತ್ತು ಕಂಟ್ರೋಲು ತಪ್ಪಿತು ಅಂತ ಅವ್ನಿಗೆ ಗೊತ್ತೇ ಆಗಲಿಲ್ಲವಂತೆ. ಮಾಮೂಲನಷ್ಟೇ ಕುಡ್ದಿದ್ದು ಅಂತ ಹೇಳ್ದ. ಆದ್ರೆ ನಾನು ನಂಬೋಲ್ಲ. ವಸಿ ಹೆಚ್ಚೇ ಇಳಿಸಿರ್ಬೇಕು... ಆ ದಿವ್ಸ ಇನ್ನೊಂದು ವಿಚಿತ್ರ ಗಮನಿಸ್ದೆ. ಅವ್ನ ಕೈನಲ್ಲಿ ಚಿಕ್ಕ ಗುರುತೊಂದು ಇತ್ತು... ಯಾವ್ದೋ ಪ್ರಾಣಿ ಕಚ್ಚಿದಂಗೆ. ಅಥವಾ ಸೂಜಿ ಚುಚ್ಚಿದ್ದೂ ಇರಬಹುದು. ಅದನ್ನ ಅವ್ನು ಗಮನಿಸಿಯೇ ಇರಲಿಲ್ಲ. ನಾನು ಹೇಳ್ದಾಗಲೂ ಅದಕ್ಕೆ ಅವನು ಕ್ಯಾರೇ ಅನ್ನಲಿಲ್ಲ."

"ಸೂಜಿ ಚುಚ್ಚಿದ್ದೆ? ಅಷ್ಟು ಸಣ್ಣದನ್ನು ನೀನು ಹೇಗೆ ನೋಡ್ದೆ?"

"ಅವ್ನು ಕೈಯನ್ನು ಮೇಲಕ್ಕೆ ಚಾಚಿ, ಗಡದ್ದಾಗಿ ನಿದ್ದೆ ಹೊಡೀತಿದ್ದ. ಅವ್ನ ಮಾತಾಡಿಸ್ಲು ಬಂದ ನಾನು ಕೈಯಲ್ಲಿ ಗುರುತು ಕಂಡೆ... ತುಸು ಕಪ್ಪುಕೆಂಪಿನ ಗುರುತು... ಅವ್ನಿಗೆ ಆಮೇಲೆ ಅದನ್ನ ತೋರಿಸಿದ್ರೆ, ಅದು ಹೇಗಾಯ್ತು ಅಂತ ಗೊತ್ತಿಲ್ಲ ಎಂದ..."

"ಏಡುಕೊಂಡಲುವಿನಲ್ಲಿ ನೀನು ರುದ್ರಮುನಿಯ ಬಗ್ಗೆ ವಿಚಾರಿಸ್ದೆಯಾ?"

"ಹೂಂ. ಹಿಂದಿನ ದಿನಾನೇ ಅವ್ನು ಬಂದಿಲ್ಲ ಅಂತ ಏಡುಕೊಂಡಲು ಹೇಳ್ದ, ಅಷ್ಟೇ."

ಕರಮಚಂದ ಅಲ್ಲಿಂದ ಹೊರಬಿದ್ದು, ಕೆಲಸಗಾರರ ಕಾಟೇಜುಗಳತ್ತ ನಡೆದ. ಅಲ್ಲಿ ಕೆಲಸಗಾರರಲ್ಲಿ ಏನೋ ವಿಚಾರಿಸುತ್ತಿದ್ದುದನ್ನು ನಾನು ಗಮನಿಸಿದೆ. ನಾನು ಕುಟ್ಟಯ್ಯನೊಡನೆ ಆತನ ಕಚೇರಿಗೆ ಬಂದೆ.

"ನಿಮ್ಮಲ್ಲಿ ರುದ್ರಮುನಿಯ ವೈಯಕ್ತಿಕ ವಿವರಗಳಿರೋ ಕಡತ ಇಲ್ವೆ? ಆತನ ದಾಖಲೆ ಪತ್ರಗಳು?" ನಾನು ಕುಟ್ಟಯ್ಯನಲ್ಲಿ ವಿಚಾರಿಸಿದೆ. ರುದ್ರಮುನಿಗೆ ಎಂತಹ ವೈಯಕ್ತಿಕ ದಾಖಲೆಗಳು ಅಂತ ನಗೆಯಾಡಿ, ಆತ ಕಪಾಟೊಂದನ್ನು ತೆರೆದು ಹುಡುಕಾಡಿ, ಕಡತವೊಂದನ್ನು ನೀಡಿದ. ಅದರಲ್ಲಿ ರುದ್ರಮುನಿಯ ಫೋಟೊ, ಆತನ ಕೈಬರಹದಲ್ಲಿರೋ ಅರ್ಜಿ, ಜೊತೆಗೆ ಸರಕಾರಿ ಗುರುತು ಪತ್ರವಿತ್ತಷ್ಟೆ. ನನಗೆ ನಿರಾಶೆಯಾಗಿ, ಕಡತ ಹಿಂದಿರುಗಿಸಿದೆ. ಆತ ಅದನ್ನು ಮರಳಿ ಕಪಾಟಿನಲ್ಲಿ ಸೇರಿಸುವಾಗ ಅಲ್ಲೊಂದು ಹೊಳೆಯುವ ಹಿಡಿಕೆ ಕಂಡಿತು... ಅದನ್ನು ಈಗಷ್ಟೇ ನಾನು ನೋಡಿದ್ದೆ! ರುದ್ರಮನಿಯ ಕಪಾಟಿನ ಬಾಗಿಲಲ್ಲಿದ್ದ ಜೋಡಿ ಹಿಡಿಕೆಗಳಲ್ಲಿ ಅದೊಂದು... ಇನ್ನೊಂದು ಅಲ್ಲೇ ಬಾಗಿಲಲ್ಲಿತ್ತು! ತುಸು ಹೊತ್ತಿನಲ್ಲಿ ಕರಮಚಂದ ಬಂದು ನಮ್ಮನ್ನು ಸೇರಿಕೊಂಡ. ಆತನ ಮೊಗದಲ್ಲಿ ಒಂದು ರೀತಿಯ ತೃಪ್ತಿಯ ಕಳೆಯಿತ್ತು.

★★★

ಆಕರ್ಷಕವಾದ ನೇಟಿವ್ ಕ್ಲಬ್ಬಿನ ಮುಖ್ಯದ್ವಾರದ ಎದುರು, ನಾವು ಎಡಕ್ಕೆ ತಿರುಗಿ ಸಾಗಿದೆವು. ಅದು ಬಾಳೇಕಾಡ್ ಎಸ್ಟೇಟಿಗೆ ಹೋಗುವ ಮಣ್ಣಿನ ಹಾದಿ. ಕಬ್ಬಿಣದ ಗೇಟಿನಲ್ಲಿ ದೊಡ್ಡ ಬೀಗವೊಂದು ನೇತಾಡುತ್ತಿತ್ತು. ಒಳಗೆ ಹೋಗಲು ಪಕ್ಕದಲ್ಲಿ ಚಿಕ್ಕ ಗೇಟು. ನಾವು ಕಾರನ್ನು ಹೊರಗಡೆಯೇ ನಿಲ್ಲಿಸಿ, ಒಳಗಡಿಯಿಟ್ಟೆವು. ಕಾಲು ಹಾದಿಯ ಎರಡೂ ಪಕ್ಕಗಳಲ್ಲಿ ಅಂಕೆಯಿಲ್ಲದೆ ಬೆಳೆದ ಕಾಡು ಗಿಡಗಂಟಿಗಳು ಮಾಲೀಕನ ನಿರ್ಲಕ್ಷತೆಯನ್ನು ಸಾರುತ್ತಿತ್ತು. ಕರಮಚಂದ ಎಚ್ಚರಿಕೆಯಿಂದ ನಜರು ಹರಿಸುತ್ತಾ ಸಾಗಿದವನು, ಒಮ್ಮೆ ಬಗ್ಗಿ ಪರಿಶೀಲಿಸಿ, ನನ್ನ